ಉದ್ದೇಶವನ್ನಿಟ್ಟುಕೊಂಡು ಸ್ಥಾಪನೆಯಾದಂಥ ಆ ಸಂಸ್ಥೆ ಇವತ್ತು ನೇಕಾರರ ಖಳನಾಯಕನಂತೆ ವರ್ತಿಸುವ ದುಸ್ಥಿತಿಯನ್ನು ಕಾಣುತ್ತಿದ್ದೇವೆ. ಇದುವರೆಗೆ ವಿಶೇಷವಾದಂಥ ಸಮಗ್ರವಾದ ತನಿಖೆಯನ್ನು ಕೈಗೊಳ್ಳಬೇಕು. ಇವತ್ತಿನವರೆಗೆ ಎಲ್ಲಾ ಸರ್ಕಾರಗಳು ಆ ನೇಕಾರರ ಬಾಳನ್ನು ನಿಕೃಷ್ಟವಾಗಿ ಕಾಣುತ್ತಾ ಬಂದಿವೆ ಇವರ ಕಿವಿಗೆ ಮುಟ್ಟುವಂಥ ನೇಕಾರರ ಕೂಗನ್ನು ನಾವು ಕಾಣುತ್ತಿದ್ದೇವೆ. ದಯವಿಟ್ಟು ಈ ಸರ್ಕಾರವಾದರೂ ಆ ರೀತಿ ಮಾಡಬಾರದೆಂದು ಹೇಳುತ್ತೇನೆ. ಈಗ ತಾವು ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೀರಿ. ನಿಮಗೆ ನಿಜವಾಗಿಯೂ ಆ ನೇಕಾರರ ಬಗ್ಗೆ ಕಳಕಳಿ ಇದ್ದರೆ, ಹಿರಿಯ ಸದಸ್ಯರಾದ ಬಚ್ಚೇಗೌಡರು ಹೇಳಿದಂತೆ ಒಂದು ತನಿಖಾ ಆಯೋಗವನ್ನು ನೇಮಿಸಬೇಕು. ನಿಷ್ಪಕ್ಷವಾದಂಥ ತನಿಖೆಯನ್ನು ಮಾಡಿ ತಪ್ಪಿತಸ್ಥರು ಮತ್ತು ಖಳನಾಯಕರಂತೆ ವರ್ತಿಸುತ್ತಿರುವವರನ್ನು ಕಠಿಣವಾದಂಥ ಶಿಕ್ಷೆಗೆ ಗುರಿಪಡಿಸುವುದಕ್ಕೆ ಕ್ರಮವನ್ನು ಕೈಗೊಳ್ಳಬೇಕು ಎಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಎಂ. ಮಹದೇವ : ಇದುವರೆಗೆ ಕೆ.ಹೆಚ್.ಡಿ.ಸಿ.ಯ ಅಧ್ಯಕ್ಷರಾಗಿದ್ದಂಥವರು ಈ ರೀತಿಯ ಕಠಿಣವಾದಂಥ ಕ್ರಮವನ್ನು ಕೈಗೊಂಡಿರಲಿಲ್ಲ ಎಂದು ನಾನು ಹೇಳುತ್ತೇನೆ. ಈಗ ನಾನು ಆ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇನೆ. ಈಗಾಗಲೇ ನಾನು 2-3 ಜನರನ್ನು ಸಸ್ಪೆಂಡ್ ಮಾಡಿದ್ದೇನೆ. ಯಾರು ಮುಖ್ಯವಾಗಿ ಡೀಲ್ ಮಾಡುತ್ತಿದ್ದರು ಅವರಲ್ಲಿ ಒಬ್ಬರನ್ನು ಸಸ್ಪೆಂಡ್ ಮಾಡಲಾಗಿದೆ, ಮುಂದೆಯೂ ಅಂಥಾದ್ದನ್ನು ಮಾಡಲು ತಯಾರಿದ್ದೇವೆ. ಅದರಲ್ಲಿ ಎರಡನೇ ಮಾತಿಲ್ಲ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿ, ವಿಜಿಲೆನ್ಸ್‌ನವರ ವರದಿ ಮತ್ತು ಮಹಾಲೇಖಪಾಲರ ವರದಿಯನ್ನು ನಾನೇ ಸ್ವತಃ ಸ್ಪಡಿ ಮಾಡಿ ಇದರಬಗ್ಗೆ ಸರ್ಕಾರದ ಮಟ್ಟದಲ್ಲಿ ತನಿಖೆ ಮಾಡಿ ನನಗೆ ವರದಿಯನ್ನು ಕೊಡಬೇಕೆಂದು ಹೇಳಿದ್ದೆ. ನಾನೇ ಚೇರ್‌ಮನ್ ಆಗಿರತಕ್ಕಂಥ ಆ ಸಂಸ್ಥೆಯೊಳಗೆ ನೇಕಾರರಿಗೆ ಅನ್ಯಾಯವಾಗತಕ್ಕಂಥ ಸಂದರ್ಭದಲ್ಲಿ, ಇಷ್ಟು ಅಕ್ರಮಗಳು ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ನಾನು ಕೈಕಟ್ಟಿ ಕುಳಿತುಕೊಳ್ಳುವುದು ಒಳ್ಳೆಯದಲ್ಲವೆಂದು ಅದರ ಕಠಿಣವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇದನ್ನು ಮಾತ್ರ ನಾವು ನಂಬಿಸುವುದಾಗಲಿ ಇದರ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಾಗಲೀ ಅಥವಾ ಯಾರದೇ ಪ್ರಭಾವಕ್ಕೆ ಮಣಿಯುವುದಾಗಲೀ ಖಂಡಿತಾ ಇಲ್ಲ. ಯಾರು ತಪ್ಪಿತಸ್ಥರು ಇದ್ದಾರೆ, ನೇಕಾರರಿಗೆ ಯಾರು ಅನ್ಯಾಯ ಮಾಡಿದ್ದಾರೆ ಅವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಂಡು ನಿಮಗೆ ತಕ್ಷಣದಲ್ಲಿ ತಿಳಿಸುತ್ತೇನೆ ಮತ್ತು ಸದನಕ್ಕೆ ಆ ಮಾಹಿತಿಯನ್ನು ಕೊಡುತ್ತೇನೆ.

(ಈ) ರಾಯಭಾಗ್ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಜಿಲ್ಲಾ ಸಹಕಾರ ಬ್ಯಾಂಕಿನ ಮುಂದೆ ಮುಷ್ಕರ ನಡೆಸುತ್ತಿರುವ ಬಗ್ಗೆ.

ಶ್ರೀ ಉಮೇಶ್ ಎ. ಕತ್ತಿ (ಹುಕ್ಕೇರಿ) : ಮಾನ್ಯ ಅಧ್ಯಕ್ಷರೆ, 13-3-2001 ರಂದು ರಾಯಬಾಗ್ ಸಕ್ಕರೆ ಕಾರ್ಖಾನೆ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದು ಇದಕ್ಕೆ ಇದುವರೆಗೆ ಸರ್ಕಾರದಿಂದ ಉತ್ತರ ಬರಲಿಲ್ಲ. ಇವತ್ತು ಪುನಃ ಮಧ್ಯಾಹ್ನದಿಂದ ಸಂಬಂಧಪಟ್ಟ ಕಾರ್ಖಾನೆಯ ಅಧ್ಯಕ್ಷರು ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕಿನ ಮುಂದೆ ಮುಷ್ಕರವನ್ನು ಕೈಗೊಂಡಿದ್ದಾರೆ. ಆದರೆ ಇಲ್ಲಿಯವರೆಗೆ ಅವರನ್ನು ಅರೆಸ್ಟ್ ಮಾಡಿಲ್ಲ. ಮಾರ್ಚ್ 31 ವರ್ಷದ ಅಂತಿಮ

ದಿನವಾಗಿದ್ದು ಅಷ್ಟರೊಳಗೆ ಬ್ಯಾಂಕಿನ ವಾರ್ಷಿಕ ಲೆಕ್ಕಪತ್ರಗಳನ್ನು ಮಾಡಿ ಮುಗಿಸಬೇಕಾಗಿರುವುದರಿಂದ, ಮುಷ್ಕರ ನಿರತರು ಆ ಬ್ಯಾಂಕಿನ ಒಳಗೆ ಹೋಗಿ - 'ಬ್ಯಾಂಕ್‌ನ್ನು ಬಂದ್ ಮಾಡಿ ನೌಕರರೆಲ್ಲಾ ರಜೆ ಹಾಕಿ ಹೋಗಬೇಕೆನ್ನುವ ಧಮಕಿಯನ್ನು ಹಾಕುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಮಧ್ಯಾಹ್ನ ಒಂದೂವರೆ ಗಂಟೆಯಿಂದ ಇಲ್ಲಿಯವರೆಗೆ ಬ್ಯಾಂಕಿನ ಯಾವುದೇ ವ್ಯವಹಾರ ನಡೆಯದಿರತಕ್ಕಂಥ ಪರಿಸ್ಥಿತಿ ಒದಗಿಬಂದಿದೆ. ರಾಯಭಾಗ್ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಮತ್ತು ಮಾಜಿ ಅಧ್ಯಕ್ಷರು ಅಂದರೆ ಅಪ್ಪ ಮಗ ಇಬ್ಬರೂ ಕೂಡ ಆ ಬ್ಯಾಂಕಿನ ಸಿಬ್ಬಂದಿಗೆ ತೊಂದರೆ ಕೊಡುವುದು, ಬ್ಯಾಂಕಿನ ಮುಂದೆ ಕುರ್ಚಿ ಹಾಕಿಕೊಂಡು ಕುಳಿತು ಯಾರನ್ನೂ ಒಳಕ್ಕೆ ಆಥವಾ ಹೊರಕ್ಕೆ ಬಿಡುತ್ತಿಲ್ಲ. ಇವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಪೊಲೀಸ್‌ನವರಿಗೆ ಹೇಳಿದರೆ ಇಲ್ಲಿಯವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಬಹುಶಃ ಒಬ್ಬ ಎಂ.ಪಿ.ಯ ತಂದೆ ಆಗಿರುವುದಕ್ಕೆ ಅವರನ್ನು ಅರೆಸ್ಟ್ ಮಾಡುತ್ತಿಲ್ಲವೆಂದು ನನಗನ್ನಿಸುತ್ತದೆ. ಇದರ ಬಗ್ಗೆ ಸರ್ಕಾರ ಕೂಡಲೇ ಸಂಬಂಧಪಟ್ಟ ಜಿಲ್ಲಾ ಎಸ್.ಪಿ. ಯವರಿಗೆ ತಿಳಿಸಿ ಆ ಮುಷ್ಕರವನ್ನು ನಿಲ್ಲಿಸಬೇಕು ಜೊತೆಗೆ ಸಂಬಂಧಪಟ್ಟವರನ್ನು ಅರೆಸ್ಟ್ ಮಾಡಿ ಜೈಲಿಗೆ ಹಾಕಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಶ್ರೀ ಉಮೇಶ್ ಕತ್ತಿ ಅವರು ವಿಶೇಷವಾಗಿ ಚರ್ಚೆಯಲ್ಲಿ ಭಾಗವಹಿಸತಕ್ಕಂಥದ್ದು ಬಹಳ ಕಡಿಮೆ. ಅವರು ಸುಮಾರು ನಾಲ್ಕು ಸಲ ವಿಧಾನಸಭೆಗೆ ಆರಿಸಿ ಬಂದಿದ್ದಾರೆ. ಬೆಳಗಾಂ ಜಿಲ್ಲೆಗೆ ಸೇರಿರತಕ್ಕಂಥ ಒಂದು ಸಕ್ಕರೆ ಕಾರ್ಖಾನೆಯ ಬಗ್ಗೆ ಬಹಳ ಮಹತ್ವವಾದ ವಿಚಾರವನ್ನು ಹೇಳಿದ್ದಾರೆ. ಇದು ಲಾ ಅಂಡ್ ಆರ್ಡರಿನ ಪ್ರಾಬ್ಲಮ್ ಆಗಿದೆ. ಮಾಜಿ ಮಂತ್ರಿಗಳು ಮತ್ತು ಒಬ್ಬ ಪಾರ್ಲಿಮೆಂಟ್ ಮೆಂಬರ್‌ನ ತಂದೆ ಹೀಗೆ ಇಬ್ಬರೂ ಸೇರಿಕೊಂಡು ಇವರನ್ನು ಥ್ರೆಟನ್ ಮಾಡುತ್ತಿದ್ದಾರೆ. ಪ್ರೊಟೆಕ್ಷನ್‌ಗೋಸ್ಕರ ತಮ್ಮ ಹತ್ತಿರ ಸಹಿತ ಈ ವಿಚಾರವನ್ನು ತೆಗೆದುಕೊಂಡು ನಾವು ಬರಬೇಕಾಗುತ್ತದೆ. ಈ ಸನ್ನಿವೇಶದಲ್ಲಿ ಸದರಿ ವಿಷಯಕ್ಕೆ ಸಂಬಂಧಪಟ್ಟ ಹಾಗೆ 18 ದಿನ ಆದರೂ ಸಹಿತ ಸರ್ಕಾರ ಯಾವುದೇ ಉತ್ತರವನ್ನು ಕೊಟ್ಟಿಲ್ಲ ಮತ್ತು ಏನೂ ಕ್ರಮವನ್ನು ತೆಗೆದುಕೊಳ್ಳುವುದಿಲ್ಲವೆಂದರೆ ಈ ಸರ್ಕಾರವನ್ನು ಜವಾಬ್ದಾರಿಯುಳ್ಳ ಸರ್ಕಾರವೆಂದು ಹೇಗೆ ಕರೆಯುವುದಕ್ಕಾಗುತ್ತದೆ? ಶ್ರೀ ಕತ್ತಿಯವರು ಜವಾಬ್ದಾರಿಯುಳ್ಳ ಶಾಸಕರು ಮತ್ತು ನಮ್ಮ ಪಕ್ಷದ ಉಪನಾಯಕರಾಗಿದ್ದಾರೆ. ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಮತ್ತು ಇದಕ್ಕೆ ಯಾವ ರೀತಿಯ ಪ್ರೊಟೆಕ್ಷನ್ ಸರ್ಕಾರದಿಂದ ಸಿಗುತ್ತದೆ ಎನ್ನುವುದು ಗೊತ್ತಾಗಬೇಕು. ಈ ವಿಷಯದಲ್ಲಿ ಸಕ್ಕರೆ ಮಂತ್ರಿಗಳಿಗಿಂತ ಹೆಚ್ಚಾಗಿ ಮಾನ್ಯ ಮುಖ್ಯಮಂತ್ರಿಗಳ ಮತ್ತು ಮಾನ್ಯ ಗೃಹಮಂತ್ರಿಗಳ ಪಾತ್ರ ಇದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾದವರು. ಅವರು ಏನು ಕ್ರಮ ತೆಗೆದುಕೊಂಡಿದ್ದಾರೆನ್ನುವುದನ್ನು ನಾವು ಕೇಳುತ್ತಲೇ ಇದ್ದೇವೆ. ಆದರೆ ಯಾವುದೂರೂ ಸಹಿತ ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ನಮ್ಮ ಮಾನ್ಯ ಸದಸ್ಯರು ಅವರ ಕ್ಷೇತ್ರದಲ್ಲಿ, ಆ ಬ್ಯಾಂಕ್‌ನಲ್ಲಿ ಯಾವ ರೀತಿಯಾಗಿ ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು.

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೆ, ನಿಜ. ಮಾನ್ಯ ಹಿರಿಯ ಸದಸ್ಯರು ಇದರ ಬಗ್ಗೆ ಹಲವಾರು ಸಲ ಪ್ರಶ್ನೆ ಮಾಡಿ ಈ ಸಮಸ್ಯೆಯ

ಪರಿಹಾರ ಮಾಡಬೇಕೆಂದು ಹೇಳಿದ್ದರು. ಸುಮಾರು 10 ಸಕ್ಕರೆ ಕಾರ್ಖಾನೆಗಳು ಇದೇ ರೀತಿ ಹದಗೆಟ್ಟಿವೆ. ಇಲ್ಲಿ ಇದು ಬಹಳ ದುಬಾರಿ ಇರಬಹುದು. ಇದೇ ರೀತಿ ಬೇರೆ ಕಾರ್ಖಾನೆಗಳಿವೆ. ಅದಕ್ಕಾಗಿ ನಮ್ಮ ಸಚಿವಸಂಪುಟದಲ್ಲಿ ಬಹಳ ದೀರ್ಘವಾಗಿ ಮಾತುಕತೆ ಮಾಡಿ ಸಚಿವಸಂಪುಟದ ಒಂದು ಉಪಸಮಿತಿಯನ್ನು ಕಾನ್ಸ್ಟಿಟ್ಯೂಟ್ ಮಾಡಿದ್ದೇವೆ. ಇವತ್ತು ಈ ಸದನಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ - 'ಈ ಸಕ್ಕರೆ ಕಾರ್ಖಾನೆಗಳ ಬಗ್ಗೆ ಸಮಗ್ರವಾದ ಮಾತುಕತೆಗೆ ಸಭೆಯನ್ನು ಕರೆಯುತ್ತೇನೆಂದು' ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೇ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ ಮೊದಲು 3 ಅಥವಾ 4ನೇ ತಾರೀಖು ನಾವೂ ಕೂಡ ಕಾನ್ಫರೆನ್ಸ್ ಹಾಲ್‌ನಲ್ಲಿ ಮೀಟಿಂಗ್‌ನ್ನು ಕರೆಯುತ್ತಿದ್ದೇವೆ. ಅದರಲ್ಲಿ ಈ ಸಕ್ಕರೆ ಕಾರ್ಖಾನೆಗಳ ಆಗುಹೋಗುಗಳು ಏನಿವೆ, ಪ್ರತ್ಯೇಕವಾಗಿ ಬೆಳಗಾಂ ಜಿಲ್ಲೆಯ ಸಕ್ಕರೆ ಕಾರ್ಖಾನೆ ಬಗ್ಗೆ ದೀರ್ಘವಾದ ಚಿಂತನೆ ಆಗಲೇಬೇಕು ಮತ್ತು ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕೆನ್ನುವುದು ಸರ್ಕಾರದ ಗಮನದಲ್ಲೂ ಕೂಡ ಇದೆ. ಅದನ್ನು ಸಹಕಾರ ಮಂತ್ರಿಗಳಿಗೂ ತಿಳಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಬಗ್ಗೆ ಸರ್ಕಾರ ತೋರಿಸಿರತಕ್ಕಂಥ ಅನುಕಂಪವನ್ನು ನಾವು ನಿಜವಾಗಿಯೂ ಮೆಚ್ಚುತ್ತೇವೆ. ಸಹಕಾರಿ ಕ್ಷೇತ್ರದ ಸಕ್ಕರೆ ಕಾರ್ಖಾನೆ ಖಾಸಗಿ ಕ್ಷೇತ್ರ, ಜಂಟಿ ಕ್ಷೇತ್ರದಲ್ಲಿ ವಲಯದಲ್ಲಿರತಕ್ಕುಂಥ ಎಲ್ಲಾ ಕಾರ್ಖಾನೆಗಳ ಸಂಬಂಧಪಟ್ಟ ಆಡಳಿತ ಮಂಡಳಿಗಳನ್ನು ಕರೆಸಿ ಚರ್ಚೆ ಮಾಡತಕ್ಕಂಥದ್ದು ಒಂದು ಭಾಗ. ಅದರಲ್ಲಿ ಸ್ವಾಭಾವಿಕವಾಗಿ ಮಾನ್ಯ ಸಕ್ಕರೆ ಮಂತ್ರಿಗಳು ಇರುತ್ತಾರೆ ಮತ್ತು ಶ್ರೀ ಕತ್ತಿಯವರು ಅಲ್ಲಿಗೆ ಬರುತ್ತಾರೆ, ಮಾತನಾಡಿ. ಆದರೆ ಇವತ್ತಿನ ಪ್ರಶ್ನೆ ಏನೆಂದರೆ ಅಲ್ಲಿ ಕಾನೂನಿನ ಪರಿಸ್ಥಿತಿ ಕೆಟ್ಟಿರತಕ್ಕಂಥದ್ದನ್ನು ಹೇಳಿದ್ದೇನೆ. ಡಿ.ಸಿ.ಸಿ. ಬ್ಯಾಂಕಿನ ಫಂಕ್ಷನ್ ಮಾಡುವುದಕ್ಕೆ ಬಿಡುತ್ತಿಲ್ಲ. ಮತ್ತು ಬೆಳಗಾಂನ ರಾಜಕೀಯ ನಿಮಗೆ ಗೊತ್ತೇ ಇದೆ. ಅದರಿಂದ ತಕ್ಷಣ ಅದರ ಮೇಲೆ ತಕ್ಷಣ ಗಮನಹರಿಸಬೇಕೆಂದು ನಮ್ಮ ಒತ್ತಾಯವಾಗಿದೆ.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಅಲ್ಲಿಯ ಲಾ ಅಂಡ್ ಪ್ರಾಬ್ಲಮ್ ಬಗ್ಗೆ ಮಾನ್ಯ ಗೃಹ ಸಚಿವರ ಹತ್ತಿರ ಮಾತನಾಡಿ ಅದಕ್ಕೆ ಸೂಕ್ತ ವ್ಯವಸ್ಥೆ ಮಾಡಲಿಕ್ಕೆ ಮಾನ್ಯ ಸದಸ್ಯರ ಪರವಾಗಿ ಹೇಳುತ್ತೇನೆ.

(ಶ್ರೀ ಬಿ.ಬಿ. ಶಿವಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಚೇರ್‌ಮನ್‌ರವರೆ, ಈ ಸಕ್ಕರೆ ಕಾರ್ಖಾನೆ ಬಗ್ಗೆ ತುರ್ತಾಗಿ ಇವತ್ತೇ ಸಂಬಂಧಪಟ್ಟ ಸಚಿವರಿಗೆ ಹೇಳಿ ನಾಳೆ ಬೆಳಿಗ್ಗೆ ಉತ್ತರ ಕೊಡಿಸುವಂಥ ಕೆಲಸವನ್ನು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಚೇರ್‌ಮನ್‌ರವರೆ, ಮಾನ್ಯ ಗೃಹಸಚಿವರು ಸದನಕ್ಕೆ ಬಂದಕೂಡಲೇ ಮಾತನಾಡಿ ಸಾಧ್ಯವಾದರೆ ಇವತ್ತೇ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಚೇರ್‌ಮನ್‌ರವರೆ, ರಾಜ್ಯದಲ್ಲಿ ಸಾಕಷ್ಟು ಸಕ್ಕರೆ ಕಾರ್ಖಾನೆಗಳು ತೊಂದರೆಯಲ್ಲಿವೆಯೆಂದು ಮಾನ್ಯ ಮಂತ್ರಿಗಳು ಹೇಳಿರುವುದು ನಿಜ. ಆದರೆ

ಬೆಳಗಾಂನಲ್ಲಿಯ ರಾಯಬಾಗ್ ಸಕ್ಕರೆ ಕಾರ್ಖಾನೆಗೆ ಯಾವ ತೊಂದರೆಯೂ ಇಲ್ಲ. ಅದನ್ನು ತೊಂದರೆಯಲ್ಲಿ ಸಂಬಂಧಿಸಿದವರು ಸೃಷ್ಟಿಸಿದ್ದಾರೆ. ಈ ಸಕ್ಕರೆ ಕಾರ್ಖಾನೆಯವರು ಡಿ.ಸಿ.ಸಿ. ಬ್ಯಾಂಕ್‌ನಿಂದ 52 ಕೋಟಿ ರೂಪಾಯಿಗಳನ್ನು ಪಡೆದಿದ್ದು, ಅದಕ್ಕೆ ಬರಬೇಕಾದಂಥ ಸಕ್ಕರೆ ಆ ಕಾರ್ಖಾನೆಯಲ್ಲಿ ಇಲ್ಲ. ಇನ್ನೂ ಹೆಚ್ಚಿನ ಸಾಲವನ್ನು ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಇದಲ್ಲದೆ 23 ಕೋಟಿ ರೂಪಾಯಿಗಳಷ್ಟು ರೈತರಿಗೆ ಬಾಕಿ ಹಣವನ್ನು ಕೊಡಬೇಕಾಗಿದೆ. ಈಗತ್ತು 112 ಕೋಟಿ ರೂಪಾಯಿಗಳಷ್ಟು ಡಿಪ್ರೀಸಿಯೇಷನ್ ಲಾಸ್ ಆಲ್ಲ, ಕ್ಯಾಷ್ ಲಾಸ್‌ನಲ್ಲಿ ಸದರಿ ಕಾರ್ಖಾನೆ ಇದೆ. 18 ಕೋಟಿ ರೂಪಾಯಿಗಳಷ್ಟು ಕರಣವನ್ನು ಎಂ.ಸಿ.ಬಿ.ಗೆ ಇದು ಕಟ್ಟಬೇಕು. ಇದಲ್ಲದೆ ಕಬ್ಬು ಕಟಾವು ಮಾಡಿದಂಥ ಜನರಿಗೆ ಕೂಲಿ ಕೊಡಬೇಕು, ಟ್ರಕ್ ಬಾಡಿಗೆ ಕೊಡಬೇಕು ಇಷ್ಟೆಲ್ಲವನ್ನೂ ಕೊಡುವುದಕ್ಕೆ ಸುಮಾರು 112 ಕೋಟಿಯಷ್ಟು ಹಣ ಬೇಕು. ಉಳಿದ ಸಕ್ಕರೆ ಕಾರ್ಖಾನೆಗಳು ಸಕ್ಕರೆಗೆ ಬೆಲೆ ಇಲ್ಲದ ತೊಂದರೆಗೆ ಸಿಕ್ಕಿಹಾಕಿಕೊಂಡಿರುವುದು ನಿಜ. ಆದರೆ ರಾಯಭಾಗ್ ಸಕ್ಕರೆ ಕಾರ್ಖಾನೆ ಉದ್ದೇಶ ಪೂರ್ವಕವಾಗಿ ರೈತರಿಗೆ ಈ ಮೋಸ ಮಾಡುವ ಕೆಲಸ ಮಾಡಿ ರೈತರನ್ನು ದಿಕ್ಕು ತಪ್ಪಿಸುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಇವತ್ತು 50 ಕೋಟಿ ರೂಪಾಯಿಗಳಿಗೆ ಒಂದು ಹೊಸ ಸಕ್ಕರೆ ಕಾರ್ಖಾನೆಯನ್ನು ಕಟ್ಟುವುದಕ್ಕೆ ಸಾಧ್ಯವಿದೆ. ಆದರೆ ಇವತ್ತು 112 ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿರುವ ಈ ಕಾರ್ಖಾನೆಯನ್ನು ಇಂಪ್ರೂವ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಖಂಡಿತ ಇಲ್ಲ. ಇಷ್ಟೆಲ್ಲ ಒಳ್ಳೆಯ ವಹಾರ ಇದ್ದರೂ ಸಹ ರೈತರನ್ನು ಎತ್ತಿಕಟ್ಟಿ ಡಿ.ಸಿ.ಸಿ. ಬ್ಯಾಂಕ್‌ನವರು ಸಾಲ ಕೊಡುತ್ತಿಲ್ಲ, ಹಾಗಾಗಿ ನಮ್ಮಿಂದ ನಿಮ್ಮ ಬಿಲ್‌ನ್ನು ಕೊಡಲಿಕ್ಕೆ ಆಗುತ್ತಿಲ್ಲವೆಂದು ಹೇಳಿ ರೈತರಿಗೆ ಬೇರೆ ದಿಕ್ಕು ತೋರಿಸುವ ಸಲುವಾಗಿ ಡಿ.ಸಿ.ಸಿ. ಬ್ಯಾಂಕ್ ಮುಂದೆ ಮುಷ್ಕರ ಮಾಡುತ್ತಿದ್ದಾರೆ. ಈ ತಿಂಗಳಲ್ಲಿ ಇದು ಎರಡನೇ ಸಲ ನಡೆಸುತ್ತಿರುವ ಮುಷ್ಕರವಾಗಿದೆ. ಸಾಲ ಕೊಡುವುದಕ್ಕೆ ಸರ್ಕಾರ ಖಾತ್ರಿ ಕೊಟ್ಟರೆ ಡಿ.ಸಿ.ಸಿ. ಬ್ಯಾಂಕ್‌ನವರು ಸಾಲ ಕೊಟ್ಟೇ ಕೊಡುತ್ತಾರೆ. ಅದರ ತೊಂದರೆ ಏನೂ ಇಲ್ಲ. ಆದರೆ ಯಾವುದೇ ಖಾತ್ರಿ ಇಲ್ಲದೆ, ಕಾರ್ಖಾನೆಯಲ್ಲಿ ಸಕ್ಕರೆ ಇಲ್ಲದೆ ಸಾಲ ಕೊಡಬೇಕೆಂದು ಹೇಳಿದರೆ ಸಾಲ ಯಾರು ಕೊಡುತ್ತಾರೆ? ರೈತರಿಗೆ ದಿಕ್ಕುತಪ್ಪಿಸುವ ಸಲುವಾಗಿಯೇ ಅವರು ಮುಷ್ಕರದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಆ ಕಾರಣಕ್ಕೋಸ್ಕರ ಅವರನ್ನು ಕೂಡಲೇ ಅರೆಸ್ಟ್ ಮಾಡಬೇಕು ಮತ್ತು ಜೈಲಿಗೆ ಹಾಕಿ ನಾಳೆ ಬೆಳಿಗ್ಗೆ ನನಗೆ ಸರ್ಕಾರದಿಂದ ಉತ್ತರವನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಚೇರ್‌ಮನ್‌ರವರೆ, ರಾಯಭಾಗ್ ಸಕ್ಕರೆ ಕಾರ್ಖಾನೆಯಲ್ಲಿ ಒಂದು ವಿಶೇಷ ನಡೆಯುತ್ತದೆ. ಅದು ಹೇಗೆಂದರೆ ಜನತಾದಳ ಸರ್ಕಾರ ಬಂದರೆ ಮನೆಯಲ್ಲಿಯ ಒಬ್ಬ ಜನತಾದಳದ ಸದಸ್ಯರು ಇವರ ಅಧ್ಯಕ್ಷರಾಗುತ್ತಾರೆ. ಕಾಂಗ್ರೆಸ್ ಸರ್ಕಾರ ಎಂದರೆ ಅವರ ಮನೆಯಲ್ಲಿ ಒಬ್ಬರು ಕಾಂಗ್ರೆಸ್‌ನವರು ಇರುತ್ತಾರೆ ಅವರನ್ನು ಅಧ್ಯಕ್ಷರನ್ನಾಗಿ ಮಾಡುತ್ತಾರೆ. ಬಿ.ಜೆ.ಪಿ. ಬಂದಾಗ ನೋಡಬೇಕು ಏನಾಗುತ್ತದೆ ಎನ್ನುವುದನ್ನು. ಆದರೆ ಇವರು ಅಧಿಕಾರಕ್ಕೆ ಬರುವುದಿಲ್ಲ. ಮುಂದೆ ನೋಡೋಣ. ಇದು ಅಲ್ಲಿರತಕ್ಕಂಥ ಸ್ಥಿತಿ. ಹಿಂದೆ ಶ್ರೀ ವಿ.ಎಲ್. ಪಾಟೀಲರ ಮಗ ಅದಕ್ಕೆ ಅಧ್ಯಕ್ಷರಾಗಿದ್ದರು. ರೈತರ ಹಿತದೃಷ್ಟಿಯಿಂದ ಆ ಸಕ್ಕರೆ ಕಾರ್ಖಾನೆಯನ್ನು ಉಳಿಸಬೇಕು, ಒಳ್ಳೆಯ ಸಕ್ಕರೆ ಕಾರ್ಖಾನೆಯೆಂದು ನಾನು ಪ್ರಯತ್ನ ಮಾಡಿ ಡಿ.ಸಿ.ಸಿ. ಬ್ಯಾಂಕ್‌ನವರನ್ನು ಮತ್ತು ನಮ್ಮ ಎಲ್ಲಾ ಅಧಿಕಾರಿಗಳನ್ನು ಕರೆಸಿ ಈ ಕಾರ್ಖಾನೆಯವರು

ಒಂದೇ ಸಲಕ್ಕೆ ಸಾಲವನ್ನು ಕಟ್ಟುವುದಕ್ಕೆ ಆಗುವುದಿಲ್ಲವೆಂದು ಹೇಳಿದ ಮೇಲೆ ಕಂತು ಮೂಲಕ ಹಣ ಕಟ್ಟುವುದಕ್ಕೆ ವ್ಯವಸ್ಥೆ ಮಾಡಿಕೊಟ್ಟೆ. ಡಿ.ಸಿ.ಸಿ. ಬ್ಯಾಂಕ್‌ನವರು ಈ ಸಕ್ಕರೆ ಕಾರ್ಖಾನೆಗೆ ದುಡ್ಡು ಕೊಡುವುದಕ್ಕೆ ಒಪ್ಪುವುದಿಲ್ಲ. ಏಕೆಂದರೆ ಇಡೀ ಸಕ್ಕರೆ ಕಾರ್ಖಾನೆಯನ್ನು ಮಾರಾಟ ಮಾಡಿದರೂ ಸಹ ಡಿ.ಸಿ.ಸಿ. ಬ್ಯಾಂಕ್‌ಗೆ ಕೊಡಬೇಕಾಗಿರುವಷ್ಟು ಹಣ ಇದರಲ್ಲಿ ಸಿಗುವುದಿಲ್ಲ. ಇಂಥ ಸ್ಥಿತಿ ಇದ್ದಾಗಲೂ ಕೂಡ ಪುನಃ ಅವರು ಮುಷ್ಕರಕ್ಕೆ ಕುಳಿತಿದ್ದಾರೆ. ಇಲ್ಲಿ ಅನ್ಯಾಯ ಆಗಲಿಕ್ಕೆ ಸರ್ಕಾರ ಕೂಡ ಕಾರಣವಾಗುತ್ತದೆ. ಕರೆದು ಸರ್ಕಾರ ವಿಚಾರ ಮಾಡಬೇಕಿತ್ತು. ಅದು ಬಿಟ್ಟು ಸುಮ್ಮನೆ ಲೆಟರ್ ಕೊಟ್ಟರೆ ಆ ಲೆಟರನ್ನು ಹಿಡಿದುಕೊಂಡು ಹೋಗಿ ಹಣ ಕೊಡುತ್ತಿಲ್ಲವೆಂದು ಮುಷ್ಕರಕ್ಕೆ ಕುಳಿತಿದ್ದಾರೆ. ಇದು ಈಗಿರುವ ಪ್ರಶ್ನೆ. ಅದಕ್ಕೆ ದಯವಿಟ್ಟು ತೀವ್ರದಲ್ಲಿ ಕರೆಸಿ ಮಾತನಾಡಿ. ಇಲ್ಲದಿದ್ದಲ್ಲಿ ಗೊಂದಲ ಉಂಟಾಗುತ್ತದೆ. ಬೆಳಗಾಂ ಜಿಲ್ಲಾ ಪರಿಸ್ಥಿತಿ ಏನು ಎನ್ನುವುದು ತಮಗೂ ಗೊತ್ತಿದೆ. ಮೊನ್ನೆಯ ದಿವಸ ಶ್ರೀ ಕತ್ತಿಯವರ ಮನೆಯ ಮುಂದೆ ಮುಷ್ಕರ ಮಾಡಿದ್ದರು. ಈಗ ಬ್ಯಾಂಕಿನ ಮುಂದೆ ಹೋಗಿ ಧರಣಿ ಕುಳಿತಿದ್ದಾರೆ. ಅಲ್ಲಿ ಹೊಡೆದಾಡಿ, ಬಡಿದಾಡಿ ಕೊಲೆ ಆಗುವಂಥ ಮಟ್ಟಕ್ಕೆ ಅವರು ಹೋಗಬಹುದು. ಆ ಕಾರಣದಿಂದ ತೀವ್ರದಲ್ಲಿ ಸರ್ಕಾರದವರು ಇವತ್ತೇ ಕ್ರಮ ತೆಗೆದುಕೊಂಡು ಮುಷ್ಕರವನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಚೇರ್‌ಮನ್‌ರವರೆ, ಸರ್ಕಾರದಿಂದ ಉತ್ತರ ಇವತ್ತು ಅಥವಾ ನಾಳೆ ಬೆಳಿಗ್ಗೆ ಕೊಡಬೇಕು. ಅಧಿವೇಶನ ನಾಳೆಗೆ ಮುಗಿಯುತ್ತಲಿದೆ. ಇದು ಸದನಕ್ಕೂ ಗೊತ್ತಾಗಲಿ, ಜನರಿಗೆ ಗೊತ್ತಾಗಲಿ, ಆ ಭಾಗ ರೈತರಿಗೂ ಸಹ ಗೊತ್ತಾಗಲಿ. ಆ ಸಕ್ಕರೆ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ಏನಿದೆ ಎನ್ನುವುದರ ನಿಜ ಸ್ಥಿತಿಯನ್ನು ಸರ್ಕಾರ ಈ ಸದನದ ಮೂಲಕ ರಾಜ್ಯದ ಜನತೆಗೆ ಹೇಳಲಿ.

6.20 ಪಿ.ಎಂ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಛೇರ್ಮನ್‌ರವರೆ, ಮಾನ್ಯ ಮಂತ್ರಿಯವರು ಸದನಕ್ಕಿಂತ ದೊಡ್ಡವರೆ? ನನಗೇನೋ ಅರ್ಥವಾಗುತ್ತಿಲ್ಲ. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಸದನದಲ್ಲಿದ್ದು ಈಗ ಪ್ರಶ್ನೆ ಬರುವಂಥ ಸಂದರ್ಭದಲ್ಲಿ ಹೊರಗಡೆ ಹೋದರೆ ಏನರ್ಥ? ಸಚಿವರು ಬರಬೇಕೆಂದು ಅಧ್ಯಕ್ಷರು ಸೂಚನೆ ಕೊಟ್ಟರೂ ಸಹ ಇನ್ನು ಬರದೇ ಇದ್ದರೆ ಹೇಗೆ?

ಶ್ರೀ ಎ. ಕೃಷ್ಣಪ್ಪ: ಸರ್ಕಾರಿ ಕೆಲಸದ ಮೇಲೆ ಹೋಗಿರಬೇಕು.

ಶ್ರೀ ಬಿ. ಸೋಮಶೇಖರ್ : ತಾವೂ ಸಹ ಮೂರು ಸಾರಿ ಗೆದ್ದು ಇಲ್ಲಿಗೆ ಬಂದಿದ್ದೀರಿ. ಸದನ ನಡೆಯುತ್ತಿರುವ ಸಮಯದಲ್ಲಿ ಸರ್ಕಾರಿ ಕೆಲಸವನ್ನು ಇಟ್ಟುಕೊಳ್ಳಬಾರದೆಂದು ತಮಗೆ ಗೊತ್ತಿರಬೇಕು. ಇದು ಒಬ್ಬ ಸದಸ್ಯರ ಹಕ್ಕಿನ ಪ್ರಶ್ನೆಯಾಗಿದೆ. ಈಗಾಗಲೇ ಸಚಿವರು ಬರಬೇಕೆಂದು ಹೇಳಿ ಕಾಲು ಘಂಟೆ ಆಗಿದ್ದರೂ ಸಹ ಇನ್ನೂ ಬಂದಿಲ್ಲ.

ಶ್ರೀ ಕರಿಯಣ್ಣ: ಮಾನ್ಯ ಛೇರ್ಮನ್‌ರವರೆ, ವಿಧಾನ ಪರಿಷತ್‌ನಲ್ಲಿ ಮಾನ್ಯ ಸಚಿವರ ಖಾತೆಗೆ ಸಂಬಂಧಪಟ್ಟಂತೆ ವಿಷಯವಿರುವುದರಿಂದ ಸಚಿವರು ಅಲ್ಲಿದ್ದಾರೆ. ಈಗ ಇಲ್ಲಿಗೆ ಬರುತ್ತೇನೆಂದು ಹೇಳಿಕಳುಹಿಸಿದ್ದಾರೆ.